International Journal of Kannada Research 2021; 7(4): 83-89




International Journal of Kannada Research
www.kannadajournal.com

**ISSN: 2454–5813**
IJKR 2021; 7(4): 83-89
© 2021 IJKR
www.kannadajournal.com
Received: 07-08-2021
Accepted: 09-09-2021

**ಡಾ.ಕೆ.ಶಿವಾನಂದಯ್ಯ**
ಸಹಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ವಿಭಾಗ
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ-
577501 ಕರ್ನಾಟಕ, ಭಾರತ

**Corresponding Author:**
**ಡಾ.ಕೆ.ಶಿವಾನಂದಯ್ಯ**
ಸಹಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ವಿಭಾಗ
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ-
577501 ಕರ್ನಾಟಕ, ಭಾರತ

# ಕನ್ನಡ ಚಂಪೂ ಸಾಹಿತ್ಯ: ಮಾರ್ಗ-ದೇಸಿ ಮುಖಾಮುಖಿ

**ಡಾ.ಕೆ.ಶಿವಾನಂದಯ್ಯ**

**ಸಾರಾಂಶ**

'ಚಂಪೂ' ಕನ್ನಡದ ವಿಶಿಷ್ಟ ಕಾವ್ಯ ಪ್ರಕಾರ. ಸುದೀರ್ಘವಾದ ಕತೆಯನ್ನು ನಿರೂಪಿಸಲು ಚಂಪೂ ಬಳಕೆಯಾಗುತ್ತಿತ್ತು. ಕನ್ನಡ ಕವಿಗಳು ಚಂಪೂ ಪ್ರಕಾರವನ್ನು ಅತ್ಯಂತ ಸಮರ್ಥವಾಗಿ ದುಡಿಸಿಕೊಂಡಿದ್ದಾರೆ. ಸಂಸ್ಕೃತ- ಕನ್ನಡ ಮುಖಾಮುಖಿಗೆ ಚಂಪೂ ನೆರವಾಗಿದೆ. ಕನ್ನಡ ಕವಿಗಳು ಕನ್ನಡಕ್ಕೇ ವಿಶಿಷ್ಟವೆನ್ನಬಹುದಾದ ಚಂಪೂವನ್ನು ರೂಪಿಸಿಕೊಟ್ಟಿದ್ದಾರೆ. ಎರಡು ನೂರು ವರ್ಷಗಳಿಗೂ ಹೆಚ್ಚು ಕಾಲ ನಿರಂತರವಾಗಿ ಚಂಪೂ ಪ್ರಕಾರದಲ್ಲಿ ಕನ್ನಡ ಕವಿಗಳು ಕಾವ್ಯ ರಚಿಸಿರುವುದನ್ನು ಕಾಣುತ್ತೇವೆ. ನೂರಾರು ಚಂಪೂ ಕಾವ್ಯಗಳನ್ನು ಅಧ್ಯಯನ ಮಾಡಲು 'ಚಂಪೂ' ಕಾವ್ಯ ಪ್ರಕಾರದ ಅಧ್ಯಯನ ಅಗತ್ಯವೆನಿಸುತ್ತದೆ.

**ಪ್ರಮುಖ ಪದಗಳು**: ಚಂಪೂ, ಲೌಕಿಕ, ಆಗಮಿಕ, ಮಾರ್ಗ, ದೇಸಿ, ವಸ್ತು, ವರ್ಣಕ, ಓದುಗಬ್ಬ, ಹಾಡುಗಬ್ಬ, ಚಾರಿತ್ರಿಕ ಪ್ರಜ್ಞೆ, ಪುರಾಣ ಕಾವ್ಯ

## ಪ್ರಸ್ತಾವನೆ

ಸಾವಿರದ್ಯೆನೂರು ವರ್ಷಗಳಿಂದ ನಿರಂತರವಾಗಿ ಬೆಳೆದು ಬಂದಿರುವ ಕನ್ನಡ ಸಾಹಿತ್ಯ ಪರಂಪರೆಯನ್ನು ಯುವ ಸಮುದಾಯಕ್ಕೆ ಪರಿಚಯಿಸುವ ಕೆಲಸ ಅಗತ್ಯವಾಗಿ ಆಗಬೇಕಾಗಿದೆ. ಸಮಕಾಲೀನ ಸಾಹಿತ್ಯದ ಓದಿನ ಜೊತೆಗೆ ಪ್ರಾಚೀನ ಕವಿ-ಕಾವ್ಯ ಪರಂಪರೆಯ ಪರಿಚಯ ಅಗತ್ಯ. ಭಾಷಿಕವಾಗಿ ಸಮಕಾಲೀನವಲ್ಲದ ಹಳೆಗನ್ನಡ ಕೃತಿಗಳನ್ನು ಓದುವ, ಅರ್ಥೈಸುವ ಭಿನ್ನ ಸಾಧ್ಯತೆಗಳನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡಬೇಕಾಗಿದೆ. ಜೊತೆಗೆ ಇದುವರೆಗಿನ ಓದು ಮತ್ತು ಓದಿನ ವಿಧಾನಗಳನ್ನು ಪರಿಶೀಲಿಸುವುದು ಕೂಡಾ ಮುಖ್ಯ. ಹಾಗಾದರೆ ಓದು ಎಂದರೇನು? ಎಂಬುದು ಪ್ರತ್ಯೇಕವಾಗಿ ಚರ್ಚಿಸಬೇಕಾದ ಸಂಗತಿ. ಅಧ್ಯಾಪಕನಾಗಿ ತರಗತಿಗಳಲ್ಲಿ ವಿದ್ಯಾರ್ಥಿಗಳು ಹಳೆಗನ್ನಡ ಕಾವ್ಯ ಅದರಲ್ಲೂ ಧಾರ್ಮಿಕ ಕಾವ್ಯಗಳನ್ನು ಓದುವಾಗ ಗೊಂದಲಗಳಿಗೆ ಒಳಗಾಗುವುದನ್ನು ಗಮನಿಸಿದ್ದೇನೆ.

ಹಳೆಗನ್ನಡ ಕಾವ್ಯಗಳನ್ನು ಓದಲು ಇರುವ ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ದಿಸೆಯಲ್ಲಿ ಮೊದಲಿನಿಂದಲೂ ಪ್ರಯತ್ನಗಳು ನಡೆದೇ ಇವೆ. ಮೊದಮೊದಲು ಹಳಗನ್ನಡ ಕೃತಿಗಳನ್ನು ಸಂಪಾದಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವ ಮೂಲಕ ಇದು ಶುರುವಾಯಿತು. ಈ ಪಠ್ಯಗಳ ಸಂಪಾದಕರು ಸುದೀರ್ಘ ಮುನ್ನುಡಿ, ಉಪೋದ್ಘಾತಗಳನ್ನು ಬರೆಯುವ ಮೂಲಕ ಉತ್ತಮ ಪ್ರವೇಶಿಕೆಯನ್ನು ಹಾಕಿಕೊಟ್ಟರು. ಕಾವ್ಯದ ಉತ್ತಮ ಭಾಗಗಳನ್ನು ಆಯ್ದು, ರಮಣೀಯ ಸನ್ನಿವೇಶಗಳನ್ನು ವಿಶ್ಲೇಷಿಸುವ ಮೂಲಕ ಕಾವ್ಯದ ರಸಾಸ್ವಾದನೆಗೆ ನೆರವಾದರು.

ಆನಂತರದಲ್ಲಿ ಸಾಮಾನ್ಯ ಓದುಗನನ್ನು ದೃಷ್ಟಿಯಲ್ಲಿಟ್ಟುಕೊಂಡು ಗದ್ಯಾನುವಾದಗಳು ರಚಿತವಾದವು. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಗದ್ಯಾನುವಾದ ಕೃತಿಗಳನ್ನು ಇಲ್ಲಿ ಉದಾಹರಿಸಬಹುದು. ಇದಕ್ಕೆ ಪೂರಕವಾಗಿ ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂಪುಟಗಳು, ಡಾ.ರಂ.ಶ್ರೀ.ಮುಗಳಿ ಅವರ ಕನ್ನಡ ಸಾಹಿತ್ಯ ಚರಿತ್ರೆ, ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯ ಹೊರತಂದ ಸಾಹಿತ್ಯ ಚರಿತ್ರೆಯ ಸಂಪುಟಗಳು ಮೊದಲಾದ ಸಾಹಿತ್ಯ ಚರಿತ್ರೆಯ ಮಾದರಿಗಳನ್ನು ನೆನಪಿಸಿಕೊಳ್ಳಬಹುದು. ಈ ಕ್ರಮದಲ್ಲೇ ಎಲ್. ಬಸವರಾಜು ಅವರ ಸರಳ ಪಠ್ಯಗಳ ರಚನೆ, ಸುಬ್ಬಣ್ಣ ನೆನಪಿನ ಮೊದಲ ಓದು ಮಾಲಿಕೆ ಹಾಗು ಎಚ್.ಎಸ್.ವೆಂಕಟೇಶಮೂರ್ತಿ ಅವರ ತಿಳಿಗನ್ನಡ ಅವತರಣಿಕೆಗಳು- ಈ ಎಲ್ಲ ಪ್ರಯತ್ನಗಳು ಹಳೆಗನ್ನಡ ಸಾಹಿತ್ಯವನ್ನು ನಮ್ಮ ನಮ್ಮ ಕಾಲದ ಅಗತ್ಯಗಳಿಗೆ ತಕ್ಕಂತೆ ಅನುವಾದಿಸಿಕೊಳ್ಳುವ ವಿವರಿಸಿಕೊಳ್ಳುವ ಪ್ರಯತ್ನ ಎನ್ನಬಹುದು. ಹಾಗೆ ನೋಡಿದರೆ ಎಲ್ಲ ಓದೂ ಭಾಷಾಂತರಿಸಿಕೊಳ್ಳುವ ಪ್ರಕ್ರಿಯೆಯೇ ಆಗಿದೆ. ಇದೊಂದು ನಿರಂತರ ಹುಡುಕಾಟ, ಕೊನೆಯಿಲ್ಲದ್ದು. ಇದೇ ಇದಷ್ಟೇ ಅರ್ಥ ಎಂಬ ನಿಲುವಿಗೆ ಬಾರದಂತಿರಬೇಕು. ಉತ್ಸಾಹದಿಂದ ಹೊಸ ಅರ್ಥಶೋಧದ ನಿರಂತರ ಹುಡುಕಾಟ ನಡೆಸುವುದು ನಮ್ಮ ಓದಿನ ಮುಖ್ಯ ಗುರಿಯಾಗಬೇಕು.

ಪ್ರಸ್ತುತ ಲೇಖನದಲ್ಲಿ ಚಂಪೂ ಸಾಹಿತ್ಯದ ಮೇಲೆ ಒಂದು ಬೆಳಕು ಬೀರಲು ಪ್ರಯತ್ನಿಸಲಾಗುವುದು. ಹೊಸ ಓದು, ಹೊಸ ನೋಟ ಸಾಧ್ಯವಾಗುತ್ತೋ ಇಲ್ಲವೋ ಗೊತ್ತಿಲ್ಲ. ಆದರೆ ನಮ್ಮ ಕಾಲದ ಇಕ್ಕಟ್ಟು-ಬಿಕ್ಕಟುಗಳನ್ನು ಕಣ್ಣಮುಂದಿರಿಸಿಕೊಂಡು ಕ್ರಿ.ಶ 10ನೆ ಶತಮಾನದಿಂದ 19ನೆ ಶತಮಾನದವರೆಗೆ ರಚಿತವಾದ ಹಾಗು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪ್ರೌಢ ಕಾವ್ಯಗಳ ರಚನೆಗೆ ಕಾರಣವಾದ ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳಲ್ಲಿ ಪ್ರಸಿದ್ಧವಾದ ಚಂಪೂ ಸಾಹಿತ್ಯವನ್ನು ಪರಿಚಯಿಸಲು ಪ್ರಯತ್ನಿಸಲಾಗುವುದು. ಈಗಾಗಲೇ ವಿದ್ವಾಂಸರು ಗುರುತಿಸಿರುವಂತೆ ಪ್ರತಿಯೊಂದು ಸಾಹಿತ್ಯ ರೂಪವು ಅಂದಿನ ಕಾಲದ ಸಂಘರ್ಷ ಹಾಗೂ ಒತ್ತಾಸೆಗಳಿಂದಾಗಿ ರೂಪುತಳೆಯುತ್ತದೆ. ಅಂದರೆ ಯುಗಧರ್ಮ ಮತ್ತು ಕವಿ ಮನೋಧರ್ಮದ ಅಪೇಕ್ಷೆಯಿಂದಾಗಿ ವೈವಿಧ್ಯಮಯವಾದ ಸಾಹಿತ್ಯ ಪ್ರಕಾರಗಳು ಜನ್ಮತಳೆಯುತ್ತವೆ. ಆದ್ದರಿಂದ ಸಾಹಿತ್ಯ ಪ್ರಕಾರವನ್ನು ಅದರ ಲಕ್ಷಣಗಳಿಗೆ ಸೀಮಿತಗೊಳಿಸಿ ಓದುವ ಕ್ರಮ ಜಡವಾಗಿಬಿಡುತ್ತದೆ. ಮತ್ತು ಅರ್ಥದ ಹೊಸ ಸಾಧ್ಯತೆಗಳನ್ನು ಮಸುಕಾಗಿಸುತ್ತದೆ. ಆದ್ದರಿಂದ ಕವಿಯ ಅಭಿವ್ಯಕ್ತಿ ಸಾಧ್ಯತೆ ಮತ್ತು ಸವಾಲುಗಳ ಸಂಕೀರ್ಣ ನೆಲೆಯಲ್ಲಿರಿಸಿ ನೋಡುವ ಕ್ರಮ ಉತ್ತಮ.

ಚಂಪೂ ಸಾಹಿತ್ಯ ಪ್ರಕಾರವನ್ನು ಈವರೆಗೆ ಪ್ರಮುಖವಾಗಿ ಮೂರು ರೀತಿಯಲ್ಲಿ ಕನ್ನಡ ವಿಮರ್ಶೆ ವಿವರಿಸಿಕೊಳ್ಳಲು ಪ್ರಯತ್ನಿಸಿದೆ: ಒಂದು: ಸಾಹಿತ್ಯ ಚರಿತ್ರೆಗಳ ಮಾದರಿಯಂತೆ ಚಂಪುವಿನ ಉಗಮ, ಮೂಲ, ನಿಷ್ಪತ್ತಿ ಮತ್ತು ಕನ್ನಡ ಚಂಪುವಿನ ವೈಶಿಷ್ಟ್ಯಗಳನ್ನು ಆಧರಿಸಿದ ಸಾಂಪ್ರದಾಯಿಕ ಅಧ್ಯಯನ ಮಾದರಿ. ಎರಡು: ಲೌಕಿಕ-ಆಗಮಿಕ; ಮಾರ್ಗ-ದೇಸಿ; ವಸ್ತುಕ-ವರ್ಣಕ; ಓದುಗಬ್ಬ-ಹಾಡುಗಬ್ಬ ಈ ಮೊದಲಾದ ಕನ್ನಡ ಕಾವ್ಯಗಳಲ್ಲಿ ಪ್ರಸ್ತಾಪಿತವಾದ ಪರಿಕಲ್ಪನೆಗಳನ್ನು ಆಧರಿಸಿದ ಮಾದರಿ. ಮೂರು: ಸಾಹಿತ್ಯ ಪಠ್ಯಗಳನ್ನು ಸಾಂಸ್ಕೃತಿಕ ಪಠ್ಯವನ್ನಾಗಿ ಓದುವ ಕ್ರಮ.

ಚಂಪೂ ಭಾರತದ ಪ್ರಾಚೀನ ಸಾಹಿತ್ಯ ಪ್ರಕಾರ. ಸಂಸ್ಕೃತ ಸೇರಿದಂತೆ ಇತರ ಭಾರತೀಯ ಭಾಷೆಗಳಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಚಂಪೂ ಪ್ರಕಾರ ಶ್ರೇಷ್ಠ ಸಾಹಿತ್ಯ ರಚನೆಗೆ ಕಾರಣವಾಗಿದೆ. ಕನ್ನಡ ಕವಿಗಳು ಚಂಪು ಪ್ರಕಾರವನ್ನು ಸಮರ್ಥವಾಗಿ ದುಡಿಸಿಕೊಂಡಿದ್ದಾರೆ. ಚಂಪೂ ಕಾವ್ಯಗಳು ವಸ್ತು ಮತ್ತು ಮೌಲ್ಯಗಳ ದೃಷ್ಟಿಯಿಂದ ಸಾರ್ವಕಾಲಿಕ

ಎನಿಸಿವೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಿರಾಜಮಾನವಾಗಿ ವಿಜೃಂಭಿಸಿದ್ದಲ್ಲದೆ ಗಟ್ಟಿ ನೆಲೆಯನ್ನು ಪಡೆದಿರುವುದು ತಿಳಿದ ಸಂಗತಿ. ಕನ್ನಡದಲ್ಲಿ ಚಂಪೂ ಪ್ರಕಾರವನ್ನು ಹುಟ್ಟುಹಾಕಿ, ಅನುಕರಣೀಯವೆಂಬಂತೆ ಕಾವ್ಯಗಳನ್ನು ರಚಿಸಿದ ಕನ್ನಡ ಚಂಪೂ ಕವಿಗಳ ಕಾವ್ಯಗಳನ್ನು ಅನುಲಕ್ಷಿಸಿ ಚಂಪುವಿನ ಸ್ವರೂಪವನ್ನು ಹೀಗೆ ಗುರುತಿಸಬಹುದು;[1]

1. ಗದ್ಯಪದ್ಯ ಹಿತಮಿತವಾಗಿ ಬೆರೆತಿರುವುದು ಪ್ರಮುಖ ಲಕ್ಷಣ
   ಆದಾಗ್ಯೂ ಪದ್ಯಕ್ಕೆ ಹೆಚ್ಚಿನ ಮನ್ನಣೆ ನೀಡಿರುವುದನ್ನು ಕಾಣುತ್ತೇವೆ. ಪದ್ಯ ಬಳಕೆಯು ಕಥಾವಸ್ತು ನಿರ್ವಹಣೆ, ವರ್ಣನೆ, ರಸಪರ ಹಾಗು ಭಾವಪೂರ್ಣ ಪ್ರಸಂಗ ಮತ್ತು ಅನುಭವದ ಅಭಿವ್ಯಕ್ತಿ ಸಂದರ್ಭದಲ್ಲಿ ಹೆಚ್ಚಾಗಿರುವುದನ್ನು ಕಾಣಬಹುದು. ಕಥೆಗೆ ಪೂರಕವಾದ ವಿವರಣೆಗಳನ್ನು ನೀಡುವ ಸಂದರ್ಭದಲ್ಲಿ ಗದ್ಯ ಬಳಕೆ ಕಂಡುಬರುತ್ತದೆ.
2. ಚಂಪೂ ಕಾವ್ಯಗಳಲ್ಲಿ ಸಾಮಾನ್ಯವಾಗಿ ಹದಿನಾಲ್ಕು ಅಥವಾ ಹದಿನಾರು ಆಶ್ವಾಸಗಳಿರುತ್ತವೆ. ಇದಕ್ಕೆ ಹೊರತಾದ ನಿದರ್ಶನಗಳು ಇವೆ. ಉದಾಹರಣೆ ಗದಾಯುದ್ಧದಲ್ಲಿ ಹತ್ತು ಆಶ್ವಾಸಗಳು ಮತ್ತು ಅಜಿತಪುರಾಣದಲ್ಲಿ ಹನ್ನೆರಡು ಆಶ್ವಾಸಗಳಿರುವುದನ್ನು ಗಮನಿಸಬಹುದು.
3. ನಿರ್ದಿಷ್ಟವಾದ ಪದ್ಯ ಮತ್ತು ಗದ್ಯಬಂಧಗಳಿಂದ ಕೂಡಿರುವುದು ಚಂಪೂ ಕಾವ್ಯದ ಮತ್ತೊಂದು ಲಕ್ಷಣ
4. ಚಂಪೂ ಕಾವ್ಯದ ಆರಂಭದಲ್ಲಿ ಕಂದ ಪದ್ಯ ಮತ್ತು ಕೊನೆಯಲ್ಲಿ ಅಂಕಿತವನ್ನೊಳಗೊಂಡ ವೃತ್ತಪದ್ಯವಿರುತ್ತದೆ.
5. ಚಂಪೂ ಕಾವ್ಯಗಳ ಛಂದೋರಚನೆಯ ವೈಶಿಷ್ಟ್ಯವೆಂದರೆ ಕಂದ ಪದ್ಯಗಳೇ ಹೆಚ್ಚಾಗಿದ್ದು, ಖ್ಯಾತಕರ್ನಾಟಕ ವೃತ್ತಗಳು ಸೇರಿದಂತೆ ವಿವಿಧ ಬಗೆಯ ಸುಮಾರು ಇಪ್ಪತ್ತು ವೃತ್ತಗಳು ಬಳಕೆಯಾಗಿವೆ.
6. ಜೈನ ಕವಿಗಳು ಕನ್ನಡ ಚಂಪೂ ಕಾವ್ಯ ರಚಿಸಿದವರಲ್ಲಿ ಮೊದಲಿಗರು.
7. ಕನ್ನಡ ಚಂಪೂ ಕಾವ್ಯಗಳಲ್ಲಿ ಸಂಸ್ಕೃತ ಮಹಾಕಾವ್ಯ ಲಕ್ಷಣಗಳ ಪ್ರಭಾವವನ್ನು ಕಾಣಬಹುದು.
8. ಕನ್ನಡ ಚಂಪೂ ಕಾವ್ಯಗಳಲ್ಲಿ ಆಗಮಿಕ ಮತ್ತು ಲೌಕಿಕ ಎಂಬ ಕಾವ್ಯ ವಿಂಗಡಣೆಗಳು ಕಂಡುಬರುತ್ತದೆ. ಆಗಮಿಕ ಕಾವ್ಯಗಳಲ್ಲಿ ಜೈನ ತೀರ್ಥಂಕರರ ಪುರಾಣಗಳ ಕಥಾವಸ್ತು ಮತ್ತು ಲೌಕಿಕ ಕಾವ್ಯಗಳಲ್ಲಿ ಕವಿಯು ಆಶ್ರಯದಾತನನ್ನು ಕಥಾವಸ್ತುವಿನೊಂದಿಗೆ ಸಮೀಕರಿಸುವುದನ್ನು ಕಾಣಬಹುದು.

ಕನ್ನಡ ಚಂಪೂವನ್ನು ಲೌಕಿಕ-ಆಗಮಿಕ; ಮಾರ್ಗ-ದೇಸಿ; ವಸ್ತುಕ-ವರ್ಣಕ; ಓದುಗಬ್ಬ-ಹಾಡುಗಬ್ಬ; ಧರ್ಮ-ಕಾವ್ಯಧರ್ಮ; ಮುಂತಾದ ದ್ವಂದ್ವ ಪರಿಕಲ್ಪನೆಗಳ ಮೂಲಕ ವಿವರಿಸಿಕೊಳ್ಳಲು ಪ್ರಯತ್ನಿಸಿದೆ. ಇದು ಕನ್ನಡ ಚಂಪುವನ್ನು ಸಂಸ್ಕೃತ ಮೂಲದಲ್ಲೇ ಗುರುತಿಸುವ ಕ್ರಮಕ್ಕೆ ವಿರುದ್ಧವಾದುದು. ಚಂಪೂ ಕೃತಿಗಳ ಆಶಯ ಮತ್ತು ದರ್ಶನವನ್ನು ಆಧರಿಸಿ ಕಾವ್ಯ ಪ್ರಕಾರವೊಂದರ ಮೂಲವನ್ನು ಹುಡುಕುವ ಪ್ರಯತ್ನ. ಇದನ್ನು ಕವಿ ತನ್ನ ಕಾಲದ ಇಕ್ಕಟ್ಟು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿಸಿದ ಬಗೆ ಮತ್ತು ಕಾವ್ಯ ಸಂವಹನದ ವೈಶಿಷ್ಟ್ಯಗಳ ಹಿನ್ನೆಲೆಯಲ್ಲಿ ವಿವೇಚಿಸಬಹುದು. ಪ್ರಾಚೀನ ಕಾಲದಲ್ಲಿ ಚಂಪೂ ಕಾವ್ಯವು ಪಂಡಿತವರ್ಗ ಮತ್ತು ಗಂಭೀರ ಓದುಗರಿಗೆ ಮಾತ್ರ ಸೀಮಿತವಾಗಿತ್ತು. ಇನ್ನು ಜನಸಾಮಾನ್ಯರಿಗಾಗಿ ಜನಪದ ಸಾಹಿತ್ಯವಿತ್ತು. ಇದನ್ನೇ ದೇಶೀಯ ಛಂದೋಪ್ರಕಾರಗಳಲ್ಲಿ ರಚಿತವಾಗುತ್ತಿದ್ದ ಹಾಡುಗಬ್ಬ ಎಂದು ಕರೆಯಲಾಗಿದೆ. ಕನ್ನಡದಲ್ಲಿ ಓದುಗಬ್ಬ ಮತ್ತು ಹಾಡುಗಬ್ಬಗಳ ಭಿನ್ನ ಬೆಳವಣಿಗೆಯನ್ನು ಸಮೀಕರಣಗೊಳಿಸಿ ಹೀಗೆ ಹೇಳಬಹುದು:

ಓದುಗಬ್ಬ-ಚಂಪೂ-ಮಾರ್ಗ-ವಸ್ತುಕ-ಅಲೌಕಿಕ (ಆಗಮಿಕ)-ಪುರಾಣ ಕಾವ್ಯ

ಹಾಡುಗಬ್ಬ- ಷಟ್ಪದಿ (-ರಗಳೆ ಇತ್ಯಾದಿ) -ದೇಸಿ - ವರ್ಣಕ- ಲೌಕಿಕ- ಚಾರಿತ್ರಿಕ ಪ್ರಜ್ಞೆ

ಈ ಸಮೀಕರಣವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಚಂಪು ಸಾಹಿತ್ಯವನ್ನು ಸಂಸ್ಕೃತ ಮೂಲದಿಂದಲೇ ಬಂದಿದೆ ಎಂಬ ನಿಲುವಿಗೆ ಭಿನ್ನವಾಗಿ ದೇಶೀಯ ನೆಲೆಯಲ್ಲಿ ಹುಡುಕುವ ಸಾಧ್ಯತೆಗಳನ್ನು ತೋರಿಸುತ್ತದೆ. ಕನ್ನಡ ಸಾಹಿತ್ಯದ

ಆರಂಭದ ಕಾವ್ಯಗಳಲ್ಲಿ 'ಚಂಪೂ' ಎಂದು ನೇರವಾಗಿ ಕರೆದಿರುವುದು ಕಂಡುಬರುವುದಿಲ್ಲ. ಆದರೆ ರೂಢಿಯಲ್ಲಿ ವಸ್ತುಕ, ಬಾಜನೆಗಬ್ಬ, ವಚನಕಾವ್ಯ ಎಂದು ಮೊದಲಾಗಿ ಕರೆದಿರುವುದನ್ನು ಕಾಣಬಹುದು. 'ಅಪ್ರತಿಮವೀರಚರಿತೆ' ಯಲ್ಲಿ 'ವಸ್ತುಕ' ಎಂದೂ, 'ಕಾವ್ಯಾವಲೋಕನ' ದಲ್ಲಿ 'ಬಾಜನೆಗಬ್ಬ' ಎಂದೂ, 'ಉದಯಾದಿತ್ಯಾಲಂಕಾರ' ದಲ್ಲಿ 'ವಚನಕಾವ್ಯ' ಎಂದು ಕರೆದಿರುವುದನ್ನು ನೆನಪಿಸಿಕೊಳ್ಳಬಹುದು.

ಕನ್ನಡ ಕಾವ್ಯವನ್ನು ಲೌಕಿಕ ಮತ್ತು ಆಗಮಿಕ ಅಥವಾ ಧಾರ್ಮಿಕ ಕಾವ್ಯ ಎಂದು ಕರೆಯಲಾಗಿದೆ. ರಾಮಾಯಣ, ಮಹಾಭಾರತಗಳ ಕಥಾವಸ್ತುವನ್ನು ಲೌಕಿಕ ಕಾವ್ಯಗಳಲ್ಲೂ, ವೈದಿಕ, ಜೈನ ಪುರಾಣಗಳ ಕಥಾವಸ್ತುವನ್ನು ಆಗಮಿಕ ಇಲ್ಲವೇ ಧಾರ್ಮಿಕ ಕಾವ್ಯಗಳಲ್ಲಿ ನಿರೂಪಿಸಲ್ಪಟ್ಟಿದೆ. 'ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ'[2] ಎಂಬ ಪಂಪನ ಮಾತನ್ನು ಸ್ಮರಿಸಿಕೊಳ್ಳಬಹುದು. ಸಂಸ್ಕೃತ ಕಾವ್ಯ ಪರಂಪರೆಯನ್ನು ಕನ್ನಡ ಕವಿಗಳು ಅನುಸರಿಸಿರುವುದನ್ನು ಇಲ್ಲಿ ಕಾಣುತ್ತೇವೆ. ವಸ್ತು ಮತ್ತು ರಚನೆಯ ದೃಷ್ಟಿಯಿಂದ ಸಂಸ್ಕೃತ ಮಹಾಕಾವ್ಯ ಪರಂಪರೆಯನ್ನು ಕನ್ನಡ ಕಾವ್ಯ ಅನುಸರಿಸಿದೆಯಾದರೂ ತನ್ನದೇ ವೈಶಿಷ್ಟ್ಯವನ್ನು ಮೈಗೂಡಿಸಿಕೊಂಡು ವಿಭಿನ್ನವಾಗಿ ಬೆಳೆದು ಬಂದಿರುವುದನ್ನು ಕಾಣಬಹುದು. ಅದರಲ್ಲಿ ಮುಖ್ಯವಾಗಿ ಛಂದಸ್ಸಿನ ವೈವಿಧ್ಯತೆ ಈ ಕಾಲದ ಚಂಪುವಿನ ವೈಶಿಷ್ಟ್ಯ. ಅತಿ ಹೆಚ್ಚು ಬಳಕೆಯಾದುದು ಕಂದ ಪದ್ಯ. ವೃತ್ತಪದ್ಯಗಳನ್ನು ಸಂದರ್ಭೋಚಿತವಾಗಿ ಬಳಕೆಯಾಗಿವೆ. ಗದ್ಯಪದ್ಯಗಳು ಹಿತಮಿತವಾಗಿಯೂ ಬಳಕೆಯಾಗಿರುವುದನ್ನು ಗಮನಿಸಿದಾಗ ಕನ್ನಡ ಚಂಪೂ ಸಂಸ್ಕೃತಕ್ಕಿಂತ ಭಿನ್ನ ಎಂಬುದು ಸ್ಪಷ್ಟವಾಗುತ್ತದೆ. ಇನ್ನು ಕನ್ನಡದ ಆರಂಭದ ಕವಿಗಳಾದ ಪಂಪ, ರನ್ನ ಮೊದಲಾದ ಕವಿಗಳ ಕಾವ್ಯಗಳಲ್ಲಿನ ನಾಟಕೀಯ ಪ್ರಸಂಗಗಳು ಕನ್ನಡ ಚಂಪೂ ಪ್ರಕಾರದ ಮೂಲವನ್ನು ದೇಶೀಯ ನೆಲೆಯಲ್ಲಿ ನೋಡುವಂತೆ ಪ್ರೇರೇಪಿಸುತ್ತವೆ.

ಕ್ರಿ.ಶ. 10 ರಿಂದ ಕ್ರಿ.ಶ. 12ನೆ ಶತಮಾನದ ಆರಂಭದವರೆಗಿನ ಅವಧಿಯನ್ನು ಚಂಪೂ ಯುಗ ಎಂದು ಸಾಹಿತ್ಯ ಚರಿತ್ರೆಕಾರರು ಗುರುತಿಸಿರುವುದು ಸರಿಯಾಗಿಯೇ ಇದೆ. ಕನ್ನಡದಲ್ಲಿ ಚಂಪೂ ಸಾಹಿತ್ಯಕ್ಕೆ ಭದ್ರವಾದ ನೆಲೆಗಟ್ಟು ಹಾಕಿದವನು ಪಂಪ(941). ಆತನ 'ಆದಿಪುರಾಣ' ಕಾವ್ಯವು ಮೊದಲ ತೀರ್ಥಂಕರನ ಚರಿತೆಯನ್ನು, ವಿಕ್ರಮಾರ್ಜುನವಿಜಯ ಮಹಾಭಾರತದ ಕತೆಯನ್ನೂ ಒಳಗೊಂಡಿದೆ. ಪೊನ್ನನ (950) 'ಶಾಂತಿಪುರಾಣ' ಹದಿನಾರನೆಯ ತೀರ್ಥಂಕರನಾದ ಶಾಂತಿನಾಥನ ಚರಿತೆಯನ್ನು ಕುರಿತು ರಚಿಸಲ್ಪಟ್ಟಿದೆ. ರಾಮಾಯಣದ ಕಥಾವಸ್ತುವನ್ನು ಒಳಗೊಂಡಿದೆ ಎಂದು ಹೇಳಲ್ಪಡುವ ಆತನ ಇನ್ನೊಂದು ಕೃತಿ 'ಭುವನೈಕರಾಮಾಭ್ಯುದಯ' ದೊರೆತಿಲ್ಲ. ಒಂದನೆಯ ನಾಗವರ್ಮನ (ಕ್ರಿ.ಶ.990) 'ಕರ್ನಾಟಕ ಕಾದಂಬರಿ' ಸಂಸ್ಕೃತದ ಬಾಣನ ಗದ್ಯ ಕೃತಿಯನ್ನು ಆಧರಿಸಿ ರಚಿತವಾದ ಚಂಪೂಕಾವ್ಯ. ರನ್ನನ (ಕ್ರಿ.ಶ.993) 'ಅಜಿತಪುರಾಣ ತಿಲಕ' ಎರಡನೆಯ ತೀರ್ಥಂಕರ ಅಜಿತನಾಥನ ಚರಿತೆ. 'ಸಾಹಸ ಭೀಮವಿಜಯ' ಅಥವಾ 'ಗದಾಯುದ್ಧ' ಮಹಾಭಾರತದ ಗದಾಸೌಪ್ತಿಕ ಪರ್ವ ಮತ್ತು ಪಂಪನ ವಿಕ್ರಮಾರ್ಜುನ ವಿಜಯ ಕಾವ್ಯದ ಹದಿಮೂರು ಹಾಗು ಹದಿನಾಲ್ಕನೆಯ ಆಶ್ವಾಸಗಳಿಂದ ಪ್ರೇರಣೆ ಪಡೆದು ರಚಿಸಲ್ಪಟ್ಟಿದೆ. ದುರ್ಗಸಿಂಹನ (ಕ್ರಿ.ಶ.1031) 'ಪಂಚತಂತ್ರ' ವಸುಭಾಗಭಟ್ಟನ 'ಪಂಚತಂತ್ರ' ಕೃತಿ ಆಧರಿಸಿ ರಚಿತವಾಗಿದೆ. ಎರಡನೆಯ ನಾಗವರ್ಮನ (ಕ್ರಿ.ಶ.1042) 'ವರ್ಧಮಾನ ಪುರಾಣ' ಇಪ್ಪತ್ನಾಲ್ಕನೆಯ ತೀರ್ಥಂಕರನಾದ ವರ್ಧಮಾನ ಮಹಾವೀರನ ಕತೆ. ಶಾಂತಿನಾಥನ (ಕ್ರಿ.ಶ.1068) 'ಸುಕುಮಾರಚರಿತೆ' ಕೃತಿ ಉಪಸರ್ಗ ಕೇವಲಿಯ ಕತೆ. ನಯಸೇನನ (ಕ್ರಿ.ಶ.1112) 'ಧರ್ಮಾಮೃತ' ಜೈನತತ್ವಗಳನ್ನು ಕಥಾರೂಪದಲ್ಲಿ ಪ್ರತಿಪಾದಿಸುತ್ತದೆ. ನಾಗಚಂದ್ರನ (ಕ್ರಿ.ಶ.1140) 'ಮಲ್ಲಿನಾಥಪುರಾಣ'ದ ಕಥಾವಸ್ತು ಹತ್ತೊಂಬತ್ತನೆಯ ತೀರ್ಥಂಕರನಾದ ಮಲ್ಲಿನಾಥನ ಚರಿತೆ. ಆತನ ಇನ್ನೊಂದು ಕೃತಿ ರಾಮಚಂದ್ರಚರಿತಪುರಾಣ. ಇದು ರೂಢಿಯಲ್ಲಿ ಪಂಪರಾಮಾಯಣ ಎಂದು ಪ್ರಸಿದ್ಧವಾಗಿದೆ. ವಿಮಲಸೂರಿ ರವಿಷೇಣರ ಸಂಪ್ರದಾಯದಲ್ಲಿ ರಚಿತವಾದ ಜೈನ ರಾಮಾಯಣ. ಇವಿಷ್ಟು ಗುರುತಿಸಬಹುದಾದ ಕನ್ನಡದ

ಬಹುಮುಖ್ಯ ಚಂಪೂ ಕೃತಿಗಳು. ಆದರೆ ಕನ್ನಡ ಸಾಹಿತ್ಯ ಚರಿತ್ರೆಕಾರರು ಪಟ್ಟಿ ಮಾಡಿರುವಂತೆ ಕನ್ನಡದಲ್ಲಿ ಕ್ರಿ.ಶ. 941ರಲ್ಲಿ ರಚಿತವಾದ ಪಂಪನ ಆದಿಪುರಾಣದಿಂದ ಮೊದಲ್ಗೊಂಡು 19ನೆ ಶತಮಾನದಲ್ಲಿ ರಚಿತವಾದ ಧೋಂಡೋ ನರಸಿಂಹ ಮುಳಬಾಗಿಲು ಅವರ ಹಿತೋಪದೇಶದ ವರೆಗೆ ಸುಮಾರು ಎಂಬತ್ತೆರಡು ಚಂಪೂಕಾವ್ಯಗಳು ರಚಿತವಾಗಿವೆ.[3]

ಕನ್ನಡದಲ್ಲಿ ಚಂಪೂಕಾವ್ಯ ಪ್ರಕಾರ ವಿಭಿನ್ನವಾಗಿ ಬೆಳೆದು ಬಂದ ಬಗೆಯನ್ನು ಪಂಪನ ಎರಡು ಕಾವ್ಯಗಳಲ್ಲಿನ ಮುಖ್ಯ ಪ್ರಸಂಗಗಳನ್ನು ವಿಶ್ಲೇಷಿಸುವ ಮೂಲಕ ಅರಿಯಲು ಪ್ರಯತ್ನಿಸಬಹುದು. ಕಾವ್ಯದ ಸ್ವರೂಪವನ್ನು ಕುರಿತ ಪಂಪನ ಪದ್ಯ ಹೀಗಿದೆ:

> ಬಗೆ ಪೊಸತಪ್ಪುದಾಗಿ
> ಮೃದುಬಂಧದೊಳೊಂದುವುದೊಂದಿ ದೇಸಿಯೊಳ್
> ಪುಗುವುದು ಪೊಕ್ಕು ಮಾರ್ಗದೊಳ್ ತಳ್ಟುದು
> ತಳ್ತೊಡೆ ಕಾವ್ಯಬಂಧಮೊ
> ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊರೆಯಿಂ
> ಬಳಲ್ದು ತುಂ
> ಬಿಳಗಳಿನೆ ತುಂಬಿ ಕೋಗಿಲೆಯೆ ಬಗ್ಗಿಸೆ
> ಸುಗ್ಗಿಯೊಳೊಪ್ಪುವಂತೆವೋಲ್ [4]

ಅಂದರೆ; ಆಲೋಚನೆ ಹೊಸದಾಗಿರಬೇಕು. ಹೀಗೆ ಹೊಸದಾದ ಆಲೋಚನೆಯು ಮೃದುವಾದ ಶಬ್ದಗಳ ಜೋಡಣೆಯಲ್ಲಿ ಸೇರಬೇಕು. ಹಾಗೆ ಸೇರಿ ಅಚ್ಚಗನ್ನಡ ಶೈಲಿಯಾದ ದೇಸಿಯಲ್ಲಿ ಪ್ರವೇಶಿಸಬೇಕು. ಹಾಗೆ ಪ್ರವೇಶಿಸಿ ಸಂಸ್ಕೃತದ ಮಾರ್ಗ ಶೈಲಿಗೆ ಹೊಂದಿಕೊಳ್ಳಬೇಕು. ಹೀಗೆ ಸೇರುವ ಕಾವ್ಯಬಂಧವು ಎಷ್ಟು ಸೊಗಸಾಗಿರುತ್ತದೆ ಎಂದರೆ, ವಸಂತ ಕಾಲದ ಎಳೆಯ ಮಾವಿನ ಮರವು ಕೆಂಪು ಚಿಗುರಿನ ಭಾರದಿಂದ ಜೋತುಬಿದ್ದಿರುವ ದುಂಬಿಗಳಿಂದ ಆವರಿಸಲ್ಪಟ್ಟ ಕೋಗಿಲೆ ಕೂಗುವುದು ಎಷ್ಟು ಸೊಗಸಾಗಿದೆಯೋ ಅಷ್ಟೇ ಸೊಗಸಾಗಿರುತ್ತದೆ ಈ ದೇಸಿ ಮಾರ್ಗಗಳ ಬೆರಕೆ. ಮತ್ತೊಂದು ಪದ್ಯ ಹೀಗಿದೆ:

> ಅಸಿಯಳವುಂಕಿ ಕೆಂದಳದೊಳೊತ್ತುವ ನೀರ್
> ಮೊಗಮಂ ಪಳಂಚೆ ಬಂ
> ಚಿಸಲಿನಿಸಾನುಮಂ ಮುಳುಗಿದಾಗಡೆ ಭೋಂಕನೆ
> ಬಂದು ಬಾಳೆಮೀನ್
> ಮುಸುಟೆ ನಿರಂತರಂ ಕರ್ದುಕೆ ಸತ್ಕವಿಯೊಳ್
> ಸಮನಾಗಿ ಮಾರ್ಗಮಂ
> ಪೊಸಯಿಸಿ ದೇಸಿಯಂ ಪೊಸತು
> ಮಾಡಿದೊಳರ್ವಳಪೂರ್ವರೂಪದಿಂ[5]

ಅಂದರೆ; ಕೃಶದೇಹಿಯಾದ ಓರ್ವಳು ತನ್ನ ಕೆಂಪನೆಯ ಅಂಗೈಯನ್ನು ಅಮುಕಿ ಚೆಲ್ಲಿದ ನೀರು ತನ್ನ ಮುಖಕ್ಕೆ ತಾಗಲು ಮತ್ತೋರ್ವಳು ತಪ್ಪಸಿಕೊಳ್ಳಲೆಂಬಂತೆ ಮುಳುಗಿದಾಗ ಇದ್ದಕ್ಕಿದ್ದಂತೆ ಬಾಳೆಯ ಮೀನು ಮುತ್ತಿಕೊಂಡು ಅವಳನ್ನು ಕಚ್ಚಲು ಅವಳು ಸತ್ಕವಿಗೆ ಸಮನಾಗಿ ಮಾರ್ಗ ಶೈಲಿಯನ್ನು ಹೊಸದಾಗಿಸಿ ದೇಸಿ ಶೈಲಿಯ ಸೌಂದರ್ಯವನ್ನು ಅಪೂರ್ವರೂಪದಿಂದ ಹೊಸತು ಮಾಡಿದಳು ಎಂದರ್ಥ.

ಪಂಪನ ಕಾವ್ಯಗಳಲ್ಲಿ ಕನ್ನಡ ಚಂಪೂ ಮಾರ್ಗದಿಂದ ದೇಸಿಯ ಕಡೆಗೆ ಹೊರಳುತ್ತಿರುವುದನ್ನು ಸ್ಪಷ್ಟವಾಗಿ ಕಾಣಬಹುದು. ಈ ಪ್ರಕ್ರಿಯೆಯನ್ನು ಕನ್ನಡ ವಿಮರ್ಶಕರು ಮೊದಲು ಮಾರ್ಗ-ದೇಸಿ ಸಮನ್ವಯ ಎಂದು ಕರೆದರು. ಆನಂತರ ಸಮನ್ವಯಕ್ಕಿಂತಲೂ ಮುಖಾಮುಖಿ ಎನ್ನುವುದು ಸಮಂಜಸ ಎಂದು ಅಭಿಪ್ರಾಯಪಟ್ಟಿರುವುದನ್ನು ಗಮನಿಸಬಹುದು. ಇಂತಹ ಪ್ರಕ್ರಿಯೆ ನಿರಂತರವಾದುದು. ಕೆ.ವಿ.ನಾರಾಯಣ ಅವರು ಹೇಳುವಂತೆ ಇದೊಂದು ಚಕ್ರೀಯ ಪ್ರಕ್ರಿಯೆ. ಅಂದರೆ ಮಾರ್ಗದಿಂದ ದೇಸಿ; ದೇಸಿಯಿಂದ ಮಾರ್ಗ ಹೀಗೆ ನಿರಂತರವಾಗಿ ನಡೆಯುವ ಪ್ರಕ್ರಿಯೆ. ಮಾರ್ಗ-ದೇಸಿ ಮುಖಾಮುಖಿಯ ಫಲಿತವೇ ಆದಿಪುರಾಣ, ವಿಕ್ರಮಾರ್ಜುನವಿಜಯ ಕೃತಿಗಳು ಎಂಬ ಮಾತನ್ನು ಒಪ್ಪಬಹುದು.

ಕನ್ನಡದ ಆದಿ ಮಹಾಕವಿ ಪಂಪ ಕನ್ನಡ ಚಂಪೂವಿಗೆ ಹಾಕಿಕೊಟ್ಟ ಮಾದರಿ ಅನುಕರಣೀಯವಾದುದು. ಇದನ್ನು ಅವನ ನಂತರ ಬಂದ ಅನೇಕ ಕವಿಗಳು ಅನುಸರಿಸಿದರು. ಅಷ್ಟೇ ಅಲ್ಲ ಕನ್ನಡ ಕಾವ್ಯ ಹೊಸ ದಾರಿಯಲ್ಲಿ ನಡೆಯಲು

ಸಾಧ್ಯವಾಯಿತು. ಇದು ಮುಂದೆ ಯುಗಧರ್ಮ ಮತ್ತು ಕವಿಯ ಧೋರಣೆಗಳಿಗೆ ತಕ್ಕಂತೆ ಹೊಸ ಹೆಜ್ಜೆ ಇರಿಸಲು ಮುಖ್ಯ ಪ್ರೇರಣೆಯನ್ನು ಒದಗಿಸಿದೆ. ಪಂಪನ ಚಂಪೂ ಕಾವ್ಯ ವೈಶಿಷ್ಟ್ಯವನ್ನು ಆದಿಪುರಾಣದ ಆದಿನಾಥನ ಪೂರ್ವಭವಾವಳಿಯ ಪ್ರಸಂಗಗಳು, ಲಲಿತಾಂಗ - ಸ್ವಯಂಪ್ರಭೆ, ವಜ್ರಜಂಘ- ಶ್ರೀಮತಿಯರ ಪ್ರೇಮ ವೃತ್ತಾಂತಗಳು, ಆದಿನಾಥನ ವಿರಕ್ತಿ ಪ್ರಸಂಗ, ಭರತ ಬಾಹುಬಲಿ ದಿಗ್ವಿಜಯ ಮುಂತಾದ ಪ್ರಸಂಗಗಳಲ್ಲೂ ಹಾಗು ವಿಕ್ರಮಾರ್ಜುನ ವಿಜಯದ ಪಾಂಡುಮಾದ್ರಿ ಪ್ರಸಂಗ, ಕರ್ಣ-ಭೀಷ್ಮರ ವಾಗ್ವಾದ, ಬನವಾಸಿ ವರ್ಣನೆ, ಅರ್ಜುನನ ಪಟ್ಟಾಭಿಷೇಕ ಪ್ರಸಂಗಗಳಲ್ಲೂ ಕಾಣಬಹುದು. ಜೊತೆಗೆ ಪಂಪನ 'ಸಮಸ್ತ' ಪರಿಕಲ್ಪನೆ, ಅವನ ಸಂಗ್ರಹ ಗುಣ, ಆಡುಮಾತಿನ ಕಾಕು, ಜನಪದರ ವರ್ತನೆಗಳು, ಗಾದೆಮಾತುಗಳು, ನುಡಿಗಟ್ಟುಗಳ ಪ್ರಯೋಗ ಮಾರ್ಗದೊಂದಿಗೆ ದೇಸಿಯನ್ನು ಬೆಸೆಯುವ ಬಗೆ ಎಂದು ಹೇಳಬಹುದು.

ಕವಿಯ ಆಶಯಗಳನ್ನು ಆಧರಿಸಿ ಪಂಪ ಚಂಪೂ ಪ್ರಕಾರವನ್ನು ಕನ್ನಡ ಸಂದರ್ಭದಲ್ಲಿ ವಿಶಿಷ್ಟ ಪ್ರಕಾರವನ್ನಾಗಿ ರೂಪಿಸಿದ ಬಗೆಯನ್ನು ಪರಿಶೀಲಿಸುವುದಾದರೆ; ಪಂಪನ ಎರಡೂ ಕೃತಿಗಳಲ್ಲೂ ಗೆಲುವಿನ ಕೊನೆಯಲ್ಲಿ ತ್ಯಾಗವನ್ನು ಕಾಣುತ್ತೇವೆ. ಇದು ಎರಡೂ ಕಾವ್ಯಗಳಲ್ಲೂ ಅಣ್ಣ ತಮ್ಮಂದಿರ ನಡುವೆ ನಡೆಯುತ್ತದೆ. ಆದಿಪುರಾಣದಲ್ಲಿ ಬಾಹುಬಲಿ ಅಣ್ಣ ಭರತನಿಗಾಗಿ ರಾಜ್ಯ ತ್ಯಾಗ ಮಾಡಿದರೆ, ವಿಕ್ರಮಾರ್ಜುನವಿಜಯದಲ್ಲಿ ಧರ್ಮರಾಯನು ತನ್ನ ತಮ್ಮ ಅರ್ಜುನನಿಗೆ ಅಧಿಕಾರವನ್ನು ಬಿಟ್ಟುಕೊಡುತ್ತಾನೆ. ಮೊದಲ ಕಾವ್ಯದಲ್ಲಿ ಅಣ್ಣನಿಗಾಗಿ ತಮ್ಮ ಅಧಿಕಾರ ತ್ಯಾಗ ಮಾಡಿದರೆ, ಎರಡನೆಯ ಕಾವ್ಯದಲ್ಲಿ ಅಣ್ಣ ತಮ್ಮನಿಗಾಗಿ ಅಧಿಕಾರ ತ್ಯಾಗ ಮಾಡುತ್ತಾನೆ. ಪಂಪ ತನ್ನ ಕಾಲದ ರಾಜಕೀಯ ವಿದ್ಯಮಾನಗಳಿಗೆ ನೀಡಿದ ಧ್ವನಿಪೂರ್ಣ ಪ್ರತಿಕ್ರಿಯೆ ಎನ್ನಬಹುದು.

ಸೋದರರೊಳ್ ಸೋದರರಂ
ಕಾದಿಸುವುದು ಸುತನ ತಂದೆಯೆಡೆಯೊಳ್ ಬಿಡದು
ತ್ಪಾದಿಸುವುದು ಕೋಪಮನಳ
ವೀದೊರೆತೆನೆ ತೊಡರ್ವುದೆಂತು ರಾಜ್ಯಶ್ರೀಯೊಳ್[6]
ಪ್ರಾಯದ ಪೆಂಪೆ ಪೆಂಪೆಮಗೆ ಮೀರಿದರಮ ತವೆ ಕೊಂದ ಪೆಂಪು ಕ
ಟ್ಟಾಯದ ಪೆಂಪು ಶಕ್ರನೊಡನೇರಿದ ಪೆಂಪಿವು ಪೆಂಪುವೆತ್ತು ನಿ
ಟ್ಟಾಯುಗಳಾಗಿ ನಿನ್ನೊಳಮರ್ದಿರ್ದುವು ನೀಂ ತಲೆವೀಸದುರ್ವರಾ
ಶ್ರೀಯನಿದಾಗದೆನ್ನದೊಳಕೊಳ್ ಪರಮೋತ್ಸವದಿಂ ಗುಣಾರ್ಣವಾ[7]

ಪಂಪನ ಎರಡು ಕಾವ್ಯಗಳಿಂದ ಆಯ್ದ ಈ ಪದ್ಯಗಳು ಸಾರ್ವಕಾಲಿಕ ಸತ್ಯಸಂಗತಿಗಳನ್ನು ಕಟ್ಟಿಕೊಡುತ್ತವೆ. ಅಧಿಕಾರಕ್ಕಾಗಿ ಒಡಹುಟ್ಟಿದ ಸೋದರರು, ತಂದೆ ಮಕ್ಕಳೇ ಪರಸ್ಪರ ಬಡಿದಾಡಿಕೊಳ್ಳುವುದನ್ನು ಕಂಡ ಕವಿ ಮನಸ್ಸು ಆತಂಕಗೊಂಡಿದೆ. ಇದರಿಂದಾಗಿ ಕವಿ ಸಹಜವಾಗಿಯೇ ಆದರ್ಶವೊಂದನ್ನು ತನ್ನ ಕಾವ್ಯದಲ್ಲಿ ಕಾಣಬಯಸುತ್ತಾನೆ. ಭರತ ಒಡಹುಟ್ಟಿದವರೆಂಬ ಪ್ರೀತಿ, ವಾತ್ಸಲ್ಯಕ್ಕಿಂತ ಅಧಿಕಾರದ ಅಹಂ ಅನ್ನು ಪ್ರದರ್ಶಿಸಿದ್ದನ್ನು ಕಂಡ ತಮ್ಮ ಬಾಹುಬಲಿ ರಾಜ್ಯತ್ಯಾಗಕ್ಕೆ ಸಿದ್ಧನಾಗುವುದನ್ನು, ಧರ್ಮರಾಯ ದುರ್ಯೋಧನನ ಅಧಿಕಾರದ ಹಪಾಹಪಿಗೆ ಸೋತು ತನ್ನ ತಮ್ಮ ಅರ್ಜುನನಿಗೆ ಅಧಿಕಾರ ಹಸ್ತಾಂತರಿಸುವುದರೊಂದಿಗೆ ಹೋಲಿಸಿದಾಗ ಪಂಪನ ಕಾವ್ಯಗಳ ಹೊಸ ನೋಟ ದಕ್ಕುತ್ತದೆ.

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀಭಟಖಡ್ಗಮಂಡಲೋ
ತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ಲಲನೆಯಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ
ನೀನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗಟ್ತೆಮಾಸದೇ[8]

ಇದು ಪಂಪನ ಪ್ರಸಿದ್ಧ ಪದ್ಯಗಳಲ್ಲಿ ಒಂದು. ಇದನ್ನು ಕನ್ನಡ

ವಿಮರ್ಶಕರು ವಿವಿಧ ನೆಲೆಗಳಲ್ಲಿ ಚರ್ಚಿಸಿದ್ದಾರೆ. ಬಾಹುಬಲಿ ಯುದ್ಧ ಮಾಡುವುದು ಸಾಮ್ರಾಜ್ಯ ಪಡೆಯಲೆಂದಲ್ಲ. ತನ್ನ ಕೀರ್ತಿ ಮಾಸುತ್ತದೆ ಎಂಬ ಕಾರಣಕ್ಕಾಗಿ. ತಂದೆಯಿಂದ ಮಕ್ಕಳಿಗೆ ಬರಬಹುದಾದ ಚರ, ಸ್ಥಿರ ಆಸ್ತಿ ಸುಲಭವಾಗಿ ಬರುತ್ತೆ, ಆದರೆ ಅವರ ತಪಸ್ಸು, ಗುಣಧರ್ಮಗಳು ಸುಲಭವಾಗಿ ಕೈ ಸೇರುವುದಿಲ್ಲ. ಮಕ್ಕಳಾದರವರು ಸ್ವತಃ ತಾವೇ ಪರಿಶ್ರಮದಿಂದ ಸಂಪಾದಿಸಿಕೊಳ್ಳಬೇಕಾಗುತ್ತದೆ ಎಂಬುದನ್ನು ಈ ಪದ್ಯ ಧ್ವನಿಸುತ್ತದೆ.

**ಸಮಾರೋಪ**

ಇದುವೆ ಸುಕವಿಪ್ರಮೋದ
ಪ್ರದಮಿದುವೆ ಸಮಸ್ತಭವ್ಯಲೋಕಪ್ರಮದ
ಪ್ರದಮೆನೆ ನೆಗಬ್ದಾದಿಪುರಾ
ಣದೊಳಱಿವುದು ಕಾವ್ಯಧರ್ಮಮುಂ
ಧರ್ಮಮುಮಂ[9]

ಅಂದರೆ ಆದಿಪುರಾಣವು ಕವಿಜನರ ಮನಸ್ಸಿಗೆ ಸಂತೋಷವನ್ನು, ಸಮಸ್ತ ಭವ್ಯಜನಕ್ಕೆ ಆನಂದದಾಯಕವಾದುದೆಂದು ಪ್ರಸಿದ್ಧವಾಗಿದೆ. ಅದರಲ್ಲಿ ಕಾವ್ಯಧರ್ಮವನ್ನೂ ಧರ್ಮವನ್ನೂ ಕಾಣಬಹುದು. ಧರ್ಮ ಮತ್ತು ಕಾವ್ಯಧರ್ಮವನ್ನು ಸಮನ್ವಯಗೊಳಿಸುವ ಮೂಲಕ ಪಂಪ ಚಂಪೂ ಕಾವ್ಯವನ್ನು ಕನ್ನಡದಲ್ಲಿ ಹೊಸದೆಂಬುವಂತೆ ರೂಪಿಸಿದ್ದಾನೆ. ತೀರ್ಥಂಕರರ ಚರಿತೆಯನ್ನು ನಿರೂಪಿಸಲು ಹೊರಟ ಪಂಪ ಜೈನಧರ್ಮವನ್ನು ಮೀರಿ ಮಾನವಪರ ತುಡಿತಗಳನ್ನು ಅಭಿವ್ಯಕ್ತಿಸುತ್ತಾನೆ. ಜೊತೆಗೆ ಧರ್ಮದಂತೆ ಕಾವ್ಯ ಕೂಡ ವಿವೇಕವನ್ನು ಕಲಿಸುತ್ತದೆ ಎಂಬ ಧೋರಣೆಯನ್ನು ಇಡೀ ಕಾವ್ಯದುದ್ದಕ್ಕೂ ಮತ್ತೆ ಮತ್ತೆ ಪ್ರತಿಪಾದಿಸುವುದನ್ನು ಕಾಣಬಹುದು.

**ಕೊನೆ ಟಿಪ್ಪಣಿಗಳು**

1. ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ 3 ಮೈಸೂರು ವಿಶ್ವವಿದ್ಯಾನಿಲಯ
2. ಪಂಪಭಾರತ ಆಶ್ವಾಸ 14 ಪದ್ಯ 60
3. ಚಂಪೂಕವಿಗಳು ಪುಟ 262, 263, 264
4. ಪಂಪಭಾರತ ಆಶ್ವಾಸ 1 ಪದ್ಯ 8
5. ಪಂಪಭಾರತ ಆಶ್ವಾಸ 5 ಪದ್ಯ 64
6. ಆದಿಪುರಾಣ ಆಶ್ವಾಸ 14 ಪದ್ಯ 122
7. ಪಂಪಭಾರತ ಆಶ್ವಾಸ 14 ಪದ್ಯ 17
8. ಆದಿಪುರಾಣ ಆಶ್ವಾಸ 14 ಪದ್ಯ 130
9. ಆದಿಪುರಾಣ ಆಶ್ವಾಸ 1 ಪದ್ಯ 38

**ಪರಾಮರ್ಶನ ಗ್ರಂಥಗಳು**

1. ನಾಗರಾಜ ಕಿ.ರಂ. - ತೆರೆದ ಪಠ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2012
2. ನಾಯಕ ಹಾ,ಮಾ. (ಸಂ)- ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ-3, ಮೈಸೂರು ವಿಶ್ವವಿದ್ಯಾನಿಲಯ, 1976
3. ನಾರಾಯಣ ಪಿ.ವಿ. - ಚಂಪೂ ಕಾವ್ಯಗಳು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, 1975
4. ಮುಗಳಿ ರಂ.ಶ್ರೀ. - ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು, 1993
5. ಮುಗಳಿ ರಂ.ಶ್ರೀ. - ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು, ಹೇಮಂತ ಸಾಹಿತ್ಯ, ಬೆಂಗಳೂರು, 2009
6. ಶಿವರುದ್ರಪ್ಪ ಜಿ.ಎಸ್. - ಪಂಪ ಒಂದು ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು, 2014